**ಓ.ಎಸ್.ನಂ.27/2019**
**ಪಿ ಡಬ್ಲ್ಯೂ: 1**

**ದಿನಾಂಕ :10.01.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಬಿ .ಕೆ.ಪಿ ವಕೀಲರಿಂದ ಃ**

ನಿಪಿ1 ರಲ್ಲಿರುವ ಸಾಗುವಳಿ ಚೀಟಿಯನ್ನು ತಾಲ್ಲೂಕು ಕಛೇರಿಗೆ ನೀಡಿ ಸ.ನಂ. 71 ರ ಜಮೀನನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖಾತೆ ವರ್ಗಾವಣೆ ಆದೇಶದ ವಿರುದ್ದ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಮೇಲ್ಮನವಿ ಸಂಖ್ಯೆ 48/2018 ಎಂಬ ಪ್ರಕರಣ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ದಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲ ನಾನು ತಕರಾರು ಸಲ್ಲಿಸಿಲ್ಲ ಎಂದರೆ ಸರಿ . ದಾಖಲಾತಿ ಸಿಗದಿರದ ಕಾರಣ ಆ ರೀತಿ ತಕರಾರು ಹಾಕಲು ಆಗಿರುವುದಿಲ್ಲ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಗೆ ಸ.ನಂ. 25/11 ದರ್ಖಾಸ್ತು ಮೂಲಕ ಬಂದಿದ್ದು, ಸದರಿ ಜಮೀನು ಸ.ನಂ. 72 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಮೇಲೆ 7 ನೇ ಪ್ರತಿವಾದಿಯು ಟ್ರಾಕ್ಟರ್ ಲೋನ್ ಪಡದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.25/2 ರ ಜಮೀನಿನಲ್ಲಿ ಭದ್ರಾ ಮೇಲ್ದಂಡೆ ಕಾಲುವಿಬೆ 27 ಗುಂಟೆ ಜಮೀನು ಭೂ ಸ್ವಾಧೀನ ಆಗಿರುತ್ತದೆ. ಸದರಿ ಜಮೀನಿ ನ ದಾಖಲೆಗಳನುವ್ನ ಹಾಜರುಪಡಿಸಿರುತ್ತೇನೆ ಸಾಕ್ಷಿ ಮುಂದುವರೆದು ದಾವಾ ಸ್ವ ತ್ತು ಭೂ ಸ್ವಾಧೀನ ಆದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ. 25/10 ರಲ್ಲಿ ಭದ್ರಾ ಮೇಲ್ದಂಡೆ ಕಾಲುವಿಗೆ ಎಷ್ಟು ಜಮೀನು ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 25/10 ರ ಜಮೀನು ಈಗ ಸ.ನಂ. 71 ಆಗಿದ್ದು ಸದರಿ ಜಮೀನಿನಲ್ಲಿ 2 ಎಕರೆ 30 ಗುಂಟೆ ಜಮೀನು ಕಾಲುವೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 25/10 ರಲ್ಲಿ 2 ಎಕರೆ 30 ಗುಂಟೆ ಜಮೀನಿಗೆ ಸಂಬಂಧಿಸಿ ನಾನು ಭೂ ಸ್ವಾಧಿನಾಧಿಕಾರಿಗಳಿಂದ ರೂ. 55 ಲಕ್ಷ ಪರಿಹಾರ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪರಿಹಾರ ಪಡೆದಿರುವುದು ನಿಜ ಆದರೆ ಎಷ್ಟು ವಿಸ್ತೀರ್ಣದ ಜಮೀನು ಭೂ ಸ್ವಾಧೀನ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಉಪನೊಂದಣಾಧಿಕಾರಿಗಳ ಕಛೇರಿಯಿಂದ ಸುಳ್ಳು ಋಣಭಾರ ಪ್ರಮಾಣ ಪತ್ರವನ್ನು ಪಡೆದು ಪರಿಹಾರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಉಪನೊಂದಣಾಧಿಕಾರಿಗೆ ಅರ್.ಆರ್.ಟಿ.ಸಿ.ಆರ್ 158/2016-17 ರ ಅರ್ಜಿಯಲ್ಲಿ ಸ.ನಂ. 25/2 ಪಿ

ಜಮೀನನ್ನು ಸ.ನಂ. 71 ಎಂದು ತಿದ್ದು ಪಡಿ ಮಾಡಲು ಕೊರಿದ್ದೆ ಎಂದರೆ ನನಗೆ ನೆನಪಿಲ್ಲ. ಸದರಿ ಅರ್ಜಿಯಲ್ಲಿ ಉಪವಿಭಾಗಾಧಿಕಾರಿಗಳು ಸ್ವಾಧೀನ ನೋಡಿ ಆಕಾರ್ ಬಂದ್ ದುರಸ್ತ್ ಮಾಡಲು ಹಿಂಬರಹವನ್ನು ತಹಶೀಲ್ದಾರರವರಿಗೆ ನೀಡಿದಾಗ ಸದರಿ ಹಿಂಬಹರವನ್ನು ದುರುಪಯೋಗ ಪಡಿಸಿಕೊಂಡು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ಎಕರೆ ಜಮೀನು ನನ್ನ ಅಣ್ಣನಿಗೆ 1995-93 ರ ಪಾಲು ವಿಭಾಗದಲ್ಲಿ ಹೋಗಿರುತ್ತದೆ. ಸದರಿ 2 ಎಕರೆ ಜಮೀನಿನಲ್ಲಿ ಭೂ ಸ್ವಾಧೀನ ಆಗಿರುತ್ತದೆ. ಸದರಿ ಜಮೀನಿನಲ್ಲಿ 30 ಗುಂಟೆ ಜಮೀನನ್ನು ನಾನು ನನ್ನ ಅಣ್ಣನ ಕಡೆಯಿಂದ ಬರೆಯಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ದರ್ಖಾಸ್ತು ಮೂಲಕ ಬಂದ ಜಮೀನಿನಲ್ಲಿ ಭೂ ಸ್ವಾಧೀನ ಆದ ಬಗ್ಗೆ ಪರಿಹಾರ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸ.ನಂ. 72 ರ ಜಮೀನಿಗೆ ಸ.ನ. 25/2 ರ ಜಮೀನಿನ ಚೆಕ್ಕು ಬಂದಿಯನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ. 25/11 ಹೊಸ ಸ.ನಂ. 72 ರ ಪಕ್ಕದಲ್ಲಿ ನನಗೆ ಸೇರಿದ ಯಾವುದೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ 25/2 ರ ಜಮೀನಿನಲ್ಲ ಭದ್ರಾ ಕಾಲುವೆ ಹಾದು ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಸ.ನಂ. 25/11 ಹೊಸ ಸ.ನಂ. 72 ರಲ್ಲಿ ಯಾವುದೆ ಹಕ್ಕು ಅಧಿಕಾರ ಇಲ್ಲದಿದ್ದರೂ ಸಹ ಸ.ನಂ. 25/2 ಚೆಕ್ಕು ಬಂದಿಯನ್ನು ಸದರಿ ಜಮೀನಿಗೆ ಕಾಣಿಸಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ.
ಹೊಸದುರ್ಗ .